**ದಿಃ-18-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ಎ.ಎನ್.ಎಲ್ ವಕೀಲರಿಂದ ಃ**

10. ನಿ.ಪಿ.1 ಕ್ರಯದ ಕರಾರು ಪತ್ರ. ನಿ.ಪಿ.1 ರ ಪ್ರಕಾರ ಕ್ರಯದ ಪ್ರತಿಫಲ ರೂ.95,00,000/- ಆಗಿದ್ದು ನಾನು ಮುಂಗಡ ಹಣವಾಗಿ ರೂ.5,00,000/-ವನ್ನು ನೀಡಿದ್ದೇನೆ ಎಂದರೆ ಸರಿ. ನಿ.ಪಿ.1 ರ ಪ್ರಕಾರ 4 ವರ್ಷದ ಒಳಗೆ ಕ್ರಯ ಪತ್ರ ಆಗಬೇಕು. ನಿ.ಪಿ.1 ರಲ್ಲಿ ಉಲ್ಲೇಖಿಸಿದಂತೆ 4 ವರ್ಷ ಆಗುವ ಮೊದಲೇ ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ಬಳಿ ರೂ.95,00,000/-ಗಳು ಇಲ್ಲದ ಕಾರಣ ಅವಧಿ ಮುಗಿಯುವ ಮೊದಲೇ ಪ್ರತಿವಾದಿಗೆ ನೋಟೀಸು ನೀಡಿ ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರ ಪ್ರಕಾರ ನಾನು ಪ್ರತಿವಾದಿಗೆ ರೂ.5,00,000/-ಗಳನ್ನು ಮಾತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಒಟ್ಟು ರೂ.8,00,000/- ನೀಡಿದ್ದೇನೆ ಎಂದು ನುಡಿಯುತ್ತಾರೆ. ಉಳಿದ ರೂ.3,00,000/-ಗಳನ್ನು ನಾನು ಪ್ರತಿವಾದಿಗೆ ನೀಡಿದ್ದೇನೆ ಎಂದು ನಿ.ಪಿ.1 ರಲ್ಲಿ ಉಲ್ಲೇಖ ಆಗಿಲ್ಲ. ಸಾಕ್ಷಿ ಮುಂದುವರಿದು ಸೆಪ್ಟಂಬರ್ 2020 ರಲ್ಲಿ ಪ್ರತಿವಾದಿ ಹಣ ಬೇಕೇ ಬೇಕು ಎಂದು ಕೇಳಿದ ಕಾರಣ ನಾನು ರೂ.3,00,000/- ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ರೂ.3,00,000/- ನೀಡಿಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ</u>** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಪ್ರಶಾಂತಿ.ಜಿ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**